

# ಅಂತರಂಗದ ಕಣ್ಣು

■ ಗೌರಿ

**ಅರ್ಧಗಂಟೆಯ ಈ ಕಿರುಚಿತ್ರ ನಮ್ಮ ಮನಸೊಳಗೆಬ್ಬಿಸುವ ತಲ್ಲಣ ಮಾತ್ರ ಬಹುಕಾಲ ಉಳಿಯುವಂಥದ್ದು. ಕಲಾವಿದನ ಬದುಕಿನ ಕುರಿತಾಗಿಯೇ ಇರುವ ಈ ಕಥನ ಕಲೆಯ ಸಾರ್ಥಕತೆಯನ್ನೂ ವ್ಯಾಖ್ಯಾನಿಸುವಂತಿದೆ.**

‘ದೇವರ ಚಿತ್ರ ಬಿಡಿಸುವುದು ನಮಗೆ ದೇವನಿಂದನೆ, ಮಹಾಪಾಪ. ಆದರೆ ನಾನು ಆ ಎಲ್ಲ ನಿಯಮಗಳನ್ನು ಮುರಿದು ಈ ಚಿತ್ರವನ್ನು ಮಾಡಿದ್ದೇನೆ’ –ಈ ಮಾತುಗಳು ಕೇಳುತ್ತಿದ್ದ ಹಾಗೆಯೇ, ತೆರೆಯ ಮೇಲಿರುವ ಕಿಶೋರ್‌ಲಾಲನ ಮನಸ್ಸು ತುಂಬಿಬರುವುದಷ್ಟೇ ಅಲ್ಲ, ಹಾಳೆಯ ಮೇಲಿನ ರಾಧಾ ಕೃಷ್ಣರ ಚಿತ್ರವನ್ನು ನೋಡುತ್ತ ನೋಡುತ್ತ ನಮ್ಮ ಕಣ್ಣುಗಳೂ ತುಂಬಿಕೊಳ್ಳುತ್ತವೆ.

ಇತ್ತೀಚೆಗಷ್ಟೇ ಯೂಟ್ಯೂಬ್‌ನಲ್ಲಿ ಬಿಡುಗಡೆಯಾದ ಕೌಶಲ್ ಓಝಾ ನಿರ್ದೇಶನದ ‘ದ ಮಿನಿಯೇಚರಿಸ್ಟ್ ಆಫ್ ಜುನಾಗಢ್’ ಕಿರುಚಿತ್ರದ ಕೊನೆಯ ದೃಶ್ಯ. ಸಂಕಲನ, ಛಾಯಾಗ್ರಹಣ, ಹಿನ್ನೆಲೆ ಸಂಗೀತ ಎಂದೆಲ್ಲ ವಿಭಾಗಗಳಾಗಿ ಛೇದಿಸಲು ಸಾಧ್ಯವೇ ಆಗದ ಹಾಗೆ ಈ ಕಿರುಚಿತ್ರ ಭಾವತೀವ್ರತೆಯಲ್ಲಿ ನಮ್ಮನ್ನು ಅದ್ದಿ ತೆಗೆಯುತ್ತದೆ. ಮನಸೊಳಗಿನ ಕಲ್ಮಶಗಳನ್ನು ಹೊರಹಾಕಿ ಇನ್ನಷ್ಟು ಮೆತ್ತಗಾಗಿಸುತ್ತದೆ. ಮತ್ತಷ್ಟು ಮನುಷ್ಯರನ್ನಾಗಿಸುತ್ತದೆ. ಆ ಇಡೀ ಪ್ರಕ್ರಿಯೆಯಲ್ಲಿ ನಿಶ್ಚಲ ಕಣ್ಣುಗಳಲ್ಲಿ, ನಡುಗುವ ಕೈಗಳಲ್ಲಿ, ಗಡಸು ಧ್ವನಿಯಲ್ಲೇ ಹಲವು ಸಂಗತಿಗಳನ್ನು ದಾಟಿಸುವ ನಾಸಿರುದ್ದೀನ್ ಶಾ ಎಂಬ ದೈತ್ಯನಟನ ಪಾಲೆಷ್ಟು? ಅರೆಗತ್ತಲಲ್ಲಿ ಭಾವತೀವ್ರತೆಯನ್ನು ಉದ್ದೀಪಿಸುವ ಸಂಗೀತದ, ಛಾಯಾಗ್ರಹಣದ ಪಾಲೆಷ್ಟು? ಕಥನದ ಪಾಲೆಷ್ಟು? ಕಪ್‌ನಲ್ಲಿ ತುದಿಗೆ ಇಷ್ಟೇ ಉಳಿದ ಚಹಾದ ಪಾಲೆಷ್ಟು? ಪಾತ್ರೆಯಲ್ಲಿನ ಹಾಲನ್ನು ಕುಡಿಯುವ ಬೆಕ್ಕಿನ ಪಾಲೆಷ್ಟು ಎಂದು ಹೇಗೆ ಹೇಳುವುದು?



ಹೆಸರು: ದ ಮಿನಿಯೇಚರಿಸ್ಟ್ ಆಫ್ ಜುನಾಗಢ್ (ಹಿಂದಿ)
ನಿರ್ದೇಶನ: ಕೌಶಲ್ ಓಝಾ
ನಿರ್ಮಾಣ: ರಂಜಿತಾ ಓಝಾ, ಚಾರು ಓಝಾ
ಛಾಯಾಗ್ರಹಣ: ಕುಮಾರ್ ಸೌರಭ್ ಸಂಕಲನ: ಅಮಿತ್ ಮೆಲ್ಹೋತ್ರ
ತಾರಾಗಣ: ನಾಸಿರುದ್ದೀನ್ ಶಾ, ರಸಿಕಾ ದುಗಾಲ್, ರಾಜ್ ಆರ್ಯನ್, ಪದ್ಮಾವತಿ ರಾವ್

ಇದು 1947ರಲ್ಲಿ ದೇಶ ವಿಭಜನೆಯ ಸಂದರ್ಭದ ಕಥೆ. ಜುನಾಗಢದಲ್ಲಿ ಇರುವ ಒಬ್ಬ ಮುಸ್ಲಿಂ ಮಿನಿಯೇಚರ್ ಕಲಾವಿದ ವೃದ್ಧಾಪ್ಯದಲ್ಲಿ ತನ್ನ ದೃಷ್ಟಿಯನ್ನೇ ಕಳೆದುಕೊಂಡಿದ್ದಾನೆ. ಅವನಿಗೇ ಗೊತ್ತಿಲ್ಲದೆ ಅವನ ಎಲ್ಲ ಕಲಾಕೃತಿಗಳನ್ನು ಅವನ ಹೆಂಡತಿ ಮತ್ತು ಮಗಳು ಸೇರಿಕೊಂಡು ಮಾರಿಬಿಟ್ಟಿದ್ದಾರೆ. ಪ್ರತಿದಿನ ರಾತ್ರಿ ಭಯಾನಕವಾಗಿ ಬೆದರಿಕೆಯೊಡ್ಡುವ ಜನರಿಂದ ತಪ್ಪಿಸಿಕೊಳ್ಳಲು ಅದು ಅವರಿಗೆ ಅನಿವಾರ್ಯವೂ ಆಗಿದೆ. ಆದರೆ ಹೀಗೆ ಮಾರಿರುವ ವಿಷಯ ಕಲಾವಿದನಿಗೆ ತಿಳಿದಿಲ್ಲ. ಹಾಗೂ ಆ ಕಲಾವಿದ ತನ್ನ ಹೃದಯದಲ್ಲಿಟ್ಟು ಪೂಜಿಸುವ, ಪರಮಾಪ್ತವಾದ ಒಂದು ಕೃತಿ ಮಾತ್ರವೇ ಉಳಿದುಕೊಂಡಿದೆ. ಈಗ ಅವರೂ ಮನೆಯನ್ನು ಮಾರಿ ಕರಾಚಿಗೆ ಹೋಗಬೇಕಾಗಿದೆ. ಅವರ ಮನೆಯನ್ನು ಕೊಂಡುಕೊಳ್ಳುವ ಕಿಶೋರ್‌ಲಾಲ, ಆ ಮನೆಯೊಟ್ಟಿಗೆ ಅಲ್ಲಿರುವ ಎಲ್ಲ ಆ್ಯಂಟಿಕ್ ವಸ್ತುಗಳನ್ನೂ ತನಗೇ ಕೊಟ್ಟು ಹೋಗಬೇಕು ಎಂದು ಕರಾರು ಮಾಡಿಸಿಕೊಳ್ಳುತ್ತಿದ್ದಾರೆ. ಕೊನೆ ಗಳಿಗೆಯಲ್ಲಿ ಅವನ ಕಿವಿಗೆ ಬೆಲೆಯನ್ನೇ ಕಟ್ಟಲಾಗದ ಆ ಕಲಾವಿದನ ಕಲಾಕೃತಿಗಳ ಕುರಿತು ಕಿವಿಗೆ ಬೀಳುತ್ತದೆ. ಸ್ವತಃ ಆ ಕಲಾವಿದನೂ ಕಲಾಕೃತಿಗಳನ್ನು ಕಿಶೋರ್‌ಲಾಲ್‌ಗೆ ತೋರಿಸಲು ಉತ್ಸುಕನಾಗಿದ್ದಾನೆ. ಕರಾರಿನ ಪ್ರಕಾರ ಆ ಕಲಾಕೃತಿಯೂ ತನಗೇ ಸೇರಿದ್ದಲ್ಲವೇ? ಎನ್ನುವ ವಾದ ಅವನದ್ದು.

ಕೊನೆಗೆ ಅವನು ಆ ಕಲಾಕೃತಿಗಳನ್ನು ಪಡೆದುಕೊಳ್ಳುತ್ತಾನೆಯೇ? ಆ ಕಲಾವಿದನ ಹೃದಯಕ್ಕೆ ಹತ್ತಿರವಾದ ಕಲಾಕೃತಿಯು ಏನಾಯಿತು? ಈ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದರೆ ಚಿತ್ರ ವೀಕ್ಷಣೆಗೆ ಸ್ವಾರಸ್ಯ ಕುಂದೀತು. ಆದರೆ ಈ ಕಿರುಚಿತ್ರದ ಆತ್ಮ ಇರುವುದು ಇಂಥ ನೋಡುವಿಕೆಯ ಕುತೂಹಲದಲ್ಲಿಯಲ್ಲ. ಮನುಷ್ಯತ್ವದ ಬಿಂಬಗಳನ್ನು ಕಟ್ಟಿಕೊಡುವ ಕಾಳಜಿಯಲ್ಲಿ; ನಮ್ಮ ಕ್ರೌರ್ಯದ ನಖಗಳನ್ನು ನಮಗೇ ಕಾಣಿಸಿ ನಾಚಿಕೆ ಹುಟ್ಟಿಸುವ ಕನ್ನಡಿಗುಣದಲ್ಲಿ. ಈ ಕಾರಣಕ್ಕಾಗಿಯೇ ಈ ಕಿರುಚಿತ್ರ ಬಹುವಾಗಿ ಕಾಡುತ್ತದೆ. ಅಷ್ಟೇ ಅಲ್ಲ, 1947ರ ಸನ್ನಿವೇಶದಲ್ಲಿಟ್ಟು ಹೇಳಲಾದ ಕಥೆ ಇಂದೋ ನಾಳೆಯೋ ನಮ್ಮ ಪಕ್ಕದಲ್ಲಿಯೇ ಘಟಿಸಬಹುದಲ್ಲವೇ ಎಂಬ ಆತಂಕವನ್ನೂ, ವಿಷಾದವನ್ನೂ ಹುಟ್ಟಿಸುತ್ತದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3QeSgIG ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.